**ಸಾಕ್ಷಿಯನ್ನು ದಿಃ 25.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 21 ಎಂದು, ಅಸೆಸ್ಮೆಂಟ್ ಶೀಟ್ ಅನ್ನು ಹಾಜರು ಪಡಿಸಿದ್ದು ಅದನುನ ನಿಪಿ. 22 ಎಂದು, ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.23 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳು ಪ್ರಥಮ ಚಿಕಿತ್ಸೆಯನ್ನು ಸರಗೂರಿನ ವಿವೇಕಾನಂದ ಆಸ್ಪತ್ರೆಯಲ್ಲಿ ಪಡೆದುಕೊಂಡು ನಂತರ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಕೇಸ್ ಶೀಟ್ ನ ಪುಟ ಸಂಖ್ಯೆ 7 ರಲ್ಲಿ ಅಪಘಾತದ ಹಿನ್ನಲೆಯನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಗಾಯಾಳುವಿಗೆ 60 ವರ್ಷ ವಯಸ್ಸು. ಗಾಯಾಳುವಿಗೆ ಗುಣಮುಖ ಆದ ಕಾರಣ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗಾಯಾಳು ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ನಾನು ಈ ದಿನ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಗಾಯಾಳು ಈ ಹಿಂದೆ ಮಾಡುತ್ತಿದ್ದ ಕೆಲಸವನ್ನು ಮುಂದುವರೆಸಬಾರದು ಎಂದು ಡಿಸ್ ಚಾರ್ಜ್ ಸಮ್ಮರಿಯಲ್ಲಿ ಮತ್ತು ಕೇಸ್ ಶೀಟ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಿಃ 24.01.2025 ರಂದು ಗಾಯಾಳುವಿಗೆ ಹೊರರೋಗಿ ದಾಖಲೆಯನ್ನು ನೀಡಿರುತ್ತೇನೆ. ಆ ದಿನ ಗಾಯಾಳು ನೋವು ಇದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಗೈಡ್ ಲೈನ್ ಪ್ರಕಾರ ನೋವಿಗೆ 4% ಮಾತ್ರ ಬರುತ್ತದೆ ಎಂದರೆ ಸರಿ. ಗೈಡ್ ಲೈನ್ ಆರ್.ಓ.ಎಂ ಸಹ ಎಕ್ಸಟ್ರಾ ಪಾಯಂಟ್ ಅಡಿಯಲ್ಲಿ ಬರುತ್ತದೆ ಎಂದರೆ

ಸರಿಯಲ್ಲ. ನಾನು ನೀಡಿರುವ ನ್ಯೂನತೆಯು ಎಕ್ಸಟ್ರಾ ಪಾಯಂಟ್ ಅಡಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಗೆಜೆಟ್ ನೋಟೀಫಿಕೇಶನ್ ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಗಾಯಾಳು ಇತ್ತೀಚಿನ ಎಕ್ಸರೇ ಯಲ್ಲಿ ಮೂಳೆ ಕೂಡಿಕೊಂಡಿದೆ ಎಂದು ಕಂಡು ಬಂದ ಕಾರಣ ಉಪಕರಣ ತೆಗೆಯಬೇಕು ಎಂದು ಸಲಹೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ಮೂಳೆ ವಕ್ರವಾಗಿ ಕೂಡಿಕೊಂಡಿರುತ್ತದೆ ಎಂದು ಉತ್ತರಿಸಿರುತ್ತಾರೆ. ಎಕ್ಸರೇ ವರದಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಎಕ್ಸರೇ ವರದಿ ಹಾಜರು ಪಡಿಸಿದರೇ ಮೂಳೆ ವಕ್ರವಾಗಿ ಕೂಡಿಕೊಂಡಿದೆ ಎಂದು ಕಂಡು ಬರುವುದಿಲ್ಲ ಎಂಬ ಕಾರಣದಿಂದ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಇಂಪ್ಲಾಟ್ ತೆಗೆಯಲು ರೂ. 65,000/- ಬೇಕಾಗುತ್ತದೆ ಎಂದು ಹೇಳಿದ್ದು ಅದಕ್ಕೆ ನಿಖರವಾದ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತ್ಯೇಕ ನ್ಯೂನತಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ನಾನು ಹೇಳಿದ ಹಾಗೆ ಗಾಯಾಳುವಿಗೆ ನ್ಯೂನತೆ ಇರುತ್ತಿದ್ದರೆ ಮೆಡಿಕಲ್ ಬೋರ್ಡ್ ಗೆ ಶಿಫಾರಸ್ಸು ಮಾಡಬಹುದು ಎಂದರೆ ಸರಿ. ನಾನು ಗಾಯಾಳುವಿಗೆ ಮೆಡಿಕಲ್ ಬೋರ್ಡ್ ಗೆ ಶಿಫಾರಸ್ಸು ಮಾಡಿರುವುದಿಲ್ಲ ಎಂದರೆ ಸರಿ. ಎಕ್ಸಟ್ರಾ ಪಾಯಂಟ್ಸ್ ಪ್ರಕಾರ 10% ನ್ಯೂನತೆ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲ ಆಗುವ ರೀತಿಯಲ್ಲಿ ಎಕ್ಸಟ್ರಾ ಪಾಯಂಟ್ ಬದಲು ಸ್ಟೇಬಿಲಿಟಿ ಕಾಂಪೊನೆಂಟ್ ಎಂದು ಓ.ಪಿ.ಡಿ ಮತ್ತು ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ತೊಂದರೆ ಇರುತ್ತಿದ್ದರೆ ನಾನು ನ್ಯೂನತೆ ಪರಿಗಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಮಾಡಿದ ಕ್ಲಿನಿಕಲ್ ವರದಿಯನ್ನು ಗೈಡ್ ಲೈನ್ ಪ್ರಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿನ ಬಲಗಾಲಿಗೆ ಮತ್ತು ಎಡಗಾಲಿಗೆ ನ್ಯೂನತೆ ಇದೆ ಎಂದು ಹೇಳಿದ್ದು ಅರ್ಜಿದಾರರಿಗೆ ಅನುಕೂಲ ಆಗಲಿ ಎಂದು ಹೆಚ್ಚಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲ ಎಂದು ಕೇಸ್ ಶೀಟ್ ಮತ್ತು ಡಿಸ್ ಚಾರ್ಜ್ ಸಮ್ಮರಿಯಲ್ಲೂ

ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಮೆಡಿಕಲ್ ಜ್ಯುರಿಸ್‌ಪ್ರೂಡೆನ್ಸ್ ಪ್ರಕಾರ ವಯಸ್ಸಾದವರಿಗೆ ನ್ಯೂನತೆ ಸಹಜವಾಗಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಗೈಡ್ ಲೈನ್ ಅನುಸರಿಸದೇ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.